ಗೆಳತಿಯರು... ಎಲ್ಲರ ಜೊತೆಗೆ ನನ್ನ ಬದುಕಿನ ಪ್ರಯಾಣ ಆರಂಭವಾಗಿತ್ತು. ನನ್ನ ನೃತ್ಯದೂಟ ಅನೇಕ ಕಡೆಗಳಲ್ಲಿ ಜರುಗುತ್ತಿತ್ತು. ಹಳ್ಳಿಗೆ ಯಾರೇ ಹಿರಿಯರು ಬರಲಿ, ಏನೇ ಕಾರ್ಯಕ್ರಮ ಇರಲಿ, ಗುಡಿಯ ಪೂಜೆ ಇರಲಿ ನನ್ನ ನೃತ್ಯದ ಪ್ರಾರ್ಥನೆಯಿಂದಲೇ ಆರಂಭ. ಕೀರ್ತನೆಗಳನ್ನು, ಜತಿಗಳನ್ನು ಲೀಲಾಜಾಲವಾಗಿ ಮಾಡಿಬಿಡುತ್ತಿದ್ದೆ. ಅಷ್ಟಪದಿಯಲ್ಲಂತೂ ಸಾಕ್ಷಾತ್ ರಾಧಾ ಮತ್ತು ಕೃಷ್ಣರೇ ಕುಣಿಯುತ್ತಿದ್ದಾರೆ ಎಂಬಂತೆ ನರ್ತನ. ಒಂದರ್ಥದಲ್ಲಿ ನಮ್ಮ ಹಳ್ಳಿಯ ರಾಣಿ ನಾನು. ನನ್ನ ಹೆಸರೂ ಒಬ್ಬ ದೇವತೆಯ ಹೆಸರೇ 'ಪಳನಿಯಮ್ಮ'. ಇವತ್ತು ನನ್ನನ್ನು 'ನಾಟ್ಯಗುರು' ಎಂದು ಕರೆಯುತ್ತಿದ್ದಾರೆ. ಆದರೆ ಅವತ್ತು ಪಳ್ನೀ... ಪಳ್ನೀ... ಎನ್ನುತ್ತಲೇ ನನ್ನನ್ನು ಇಡೀ ಊರು ಕರೆಯುತ್ತಿದ್ದುದು. ನಾನು ಹೊರಗೆ ಹೊರಟರೆ ಜರತಾರಿ ಲಂಗ, ಜರತಾರಿ ಜಂಪರ್, ಕತ್ತಿನಲ್ಲಿ ಒಂದೆಳೆ ಸರ, ಕಿವಿಯಲ್ಲಿ ಜುಮುಕಿ, ಕೈತುಂಬಾ ಗಾಜಿನ ಬಳೆಗಳು, ಕಾಲಲ್ಲಿ ಬೆಳ್ಳಿಗೆಜ್ಜೆ, ಸೊಂಟಕ್ಕೆ ವಡ್ಯಾಣ... ಈ ವಡ್ಯಾಣಕ್ಕಂತೂ ಅಮ್ಮನ ಬಳಿ ಯಾವಾಗಲೂ ಜಗಳ ಮಾಡುತ್ತಿದ್ದೆ. 'ಹೆಣ್ಣುಮಕ್ಕಳು ಅತೀ ಅಲಂಕಾರ ಮಾಡಿಕೊಳ್ಳಬಾರದು ಕಣೆ' ಎಂದು ಹೇಳುತ್ತಲೇ ಅವಳು ತನ್ನ ಹಳೆಯ ಜರತಾರಿ ಸೀರೆಯ ಸೆರಗನ್ನೇ ಮಡಿಸಿ ಹೊಲೆಸಿ ವಡ್ಯಾಣ ಮಾಡಿ ಹಾಕುತ್ತಿದ್ದಳು. ಉದ್ದವಾದ ಜಡೆ ತುಂಬಾ ಮಲ್ಲಿಗೆ ಮೊಗ್ಗಿನ ದಂಡೆ ಮುಡಿದು, ಹಣೆಯಲ್ಲಿ ವಿಭೂತಿ, ಕುಂಕುಮ ಕೆಳಗೊಂದು ಕಪ್ಪು ಚುಕ್ಕಿಯನೂ ಸೇರಿಸಿ ಇಟ್ಟುಕೊಂಡು ಮನೆಯ ಮೆಟ್ಟಿಲು ಇಳಿಯುತ್ತಿದ್ದರೆ 'ಪಳನಿಯಮ್ಮನೇ' ಚಿಕ್ಕ ಹುಡುಗಿಯಾಗಿ ಬಂದಿದ್ದಾಳೇನೋ ಎಂಬಂತೆ ಜನರು ನೋಡುತ್ತಿದ್ದರು.

ಅದೇನಾಯ್ತೋ. ಇದ್ದಕ್ಕಿದ್ದಂತೆ ಮಕ್ಕಳ ಕಳ್ಳರು ಬಂದಿದ್ದಾರೆ ಎಂಬ ಸುದ್ದಿ ಊರ ತುಂಬ ಹಬ್ಬಿತು. ಅಮ್ಮ ನನ್ನನ್ನು ಹೊರಗೆ ಹೋಗಲು ಬಿಡದೆ ಮನೆಯಲ್ಲೇ ಬಿಗಿ ಮಾಡಿದಳು. ಎಲ್ಲೂ ಹೋಗುವಂತಿಲ್ಲ. ಕೊನೆಗೆ ದೇವಸ್ಥಾನಕ್ಕೆ ಕೂಡ ಅಮ್ಮನ ಜೊತೆಯಲ್ಲೇ ಹೋಗಿ ಬರುವಂತೆ ಆಗಿಬಿಟ್ಟಿತು. ಐದಾರು ದಿನ ಕಳೆಯುವಷ್ಟರಲ್ಲಿ ನಾನು ವಿಪರೀತ ಹಟ ಮಾಡತೊಡಗಿದೆ. ಗೆಳತಿ ಪೊನ್ನಿಯ ಮನೆಗೆ ಆಡಲು ಹೋಗಲೇಬೇಕು ಅಂತ ನನ್ನ ಹಟ. ಅಪ್ಪಅಮ್ಮ ಎಲ್ಲರೂ ಗರಂ ಆಗಿಬಿಟ್ಟರು. ಹದಿನೈದು ದಿನ ಆಯಿತು. ಅಂದು ಶುಕ್ರವಾರ. ಸಂಜೆ ಅಮ್ಮ ದೇವಾಲಯಕ್ಕೆ ಹೊರಟಿದ್ದಳು. ನನ್ನನ್ನೂ ಕರೆದುಕೊಂಡೇ ಹೊರಟಳು. ಸ್ವಲ್ಪ ಬೇಸರ ಕಳೆಯಲಿ ಎಂದು ಇರಬೇಕು. ಪೊನ್ನಿಯ ಮನೆ ದಾರಿಯಲ್ಲಿ ಸಿಗುತ್ತದೆ. ಅವಳು ತನ್ನ ಮನೆ ಜಗುಲಿಯ ಮೇಲೆ ಒಬ್ಬಳೇ ಚೌಕಾಬಾರಾ ಆಡುತ್ತಿದ್ದಳು. ಅಮ್ಮನ ಕೈಹಿಡಿದು ಹೊರಟ ನನ್ನನ್ನು ನೋಡಿ ಕರೆದಳು. ನಾನು 'ವಾಡೀ' ಅಂದೆ. ಅವಳು 'ವಂದೇ...' ಎನ್ನುತ್ತಾ ಅವಳಮ್ಮನನ್ನು ಕೂಗಿದ್ದಳು. ಅಮ್ಮ ಮತ್ತು ಅವರಮ್ಮ ಇಬ್ಬರೂ ಮಾತಾಡಿ ಕೊನೆಗೆ ಪೊನ್ನಿಯನ್ನು ಅವರಮ್ಮ ನಮ್ಮ ಜೊತೆ ಕಳಿಸಿದರು. ದೇವಾಲಯ ದೊಡ್ಡದು. ಅಮ್ಮ ಪ್ರದಕ್ಷಿಣೆ ಹಾಕಿ ಕಾಯಿ ಒಡೆಸಿದಳು. ನಾನು, ಪೊನ್ನಿ ಇಬ್ಬರೂ ದೇವರಿಗೆ ನಮಸ್ಕಾರ ಮಾಡಿ ಅಲ್ಲೆ ಕಟ್ಟೆಯ ಮೇಲೆ ಕುಳಿತಿದ್ದೆವು. ಅಮ್ಮ ಕಾಯಿ ಚೂರು ಮಾಡಿ ನಮ್ಮಿಬ್ಬರಿಗೂ ತಿನ್ನಲು ಕೊಟ್ಟು ಅವಳಿಗೆ ಗೆಳತಿ ಸಿಕ್ಕಿದ್ದರಿಂದ ಇಬ್ಬರೂ ಹರಟೆಗೆ ತೊಡಗಿದರು. ಎಷ್ಟೋ ದಿನಗಳಿಂದ ಆಡದೇ ಮನೇಲೇ ಕುಳಿತಿದ್ದ ನನಗೆ ಪೊನ್ನಿಗೆ ಆಟಕ್ಕೆ ಹುರುಪು ಸಿಕ್ಕಿತ್ತು. ದೇವಾಲಯದ ತುಂಬಾ ಓಡುತ್ತಾ ಆಡುತ್ತಿದ್ದೆವು. ಏನಾಯಿತೋ... ಓಡುತ್ತ ಓಡುತ್ತ ದೇವಾಲಯದ ಹೊರಬಾಗಿಲಿಗೆ ಬಂದಿದ್ದೆ. ಅಲ್ಲಿದ್ದ ಬಿಳೀ ಗಡ್ಡದ ಮುದುಕನ ಕೈಗೆ ನನ್ನ ಕೈಯಲ್ಲಿದ್ದ ತೆಂಗಿನಕಾಯಿ ಚೂರನ್ನು ಹಾಕಲು ಹೋಗಿದ್ದಷ್ಟೆ ನೆನಪು. ಮುಂದಿನದು... ಗಕ್ಕೆಂದು ನಿಂತಿತ್ತು ನನ್ನ ನೆನಪಿನ ರೈಲು. ಮುಂದಿನದೇನೂ ನನಗೆ ಗೊತ್ತಿಲ್ಲ. ನಿಟ್ಟುಸಿರಿಟ್ಟೆ. ದಢೂತಿ